## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
## ದಕ್ಷಿಣ ಕನ್ನಡ, ಮಂಗಳೂರು
## ಸ್ಪೆಷಲ್ ಕೇಸ್ ನಂಬ್ರ 11/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಘು ನಾಯಕ್ | ಚಾಸಾಃ 22 |
| ತಂದೆಯ ಹೆಸರು | : | ಸಕ್ರಪ್ಪ | ಫ್ರಾಸಾಃ 21 |
| ಪ್ರಾಯ | : | 39 ವರ್ಷ | ದಿನಾಂಕಃ 06.05.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ಉದ್ಯೋಗ | : | ಪೊಲೀಸ್ ಉಪ ನಿರೀಕ್ಷಕರು, ಸುರತ್ಕಲ್ ಪೊಲೀಸ್ ಠಾಣೆ | |
| ವಾಸಸ್ಥಳ | : | ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ದಿಃ 7.09.2020 ರಿಂದ 7.07.2023 ರವರೆಗೆ ಕಂಕನಾಡಿ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 14.06.2021 ರಂದು ಡಿ.ಸಿ.ಪಿ. ಕಾನೂನು ಸುವವಸ್ಥೆ ರವರ ಆದೇಶದ ಮೇರೆಗೆ ಪೂರ್ವ ಪೊಲೀಸ್ ಠಾಣೆಯ ಪಿ.ಐ. ಫ್ರಾಸಾ–17 ರವರು ಕಂಕನಾಡಿ ನಗರ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ನೀಡಿದ ಜ್ಞಾಪನವನ್ನು ಸ್ವೀಕರಿಸಿ ಪರಿಶೀಲಿಸಿದ್ದು ಅದರಲ್ಲಿ ಸೂಚಿಸಿದ ಈ ಪ್ರಕರಣದ 2 ನೇ ಆರೋಪಿಯನ್ನು ವಶಕ್ಕೆ ಪಡೆದು ತಮ್ಮ ಮುಂದೆ ಹಾಜರುಪಡಿಸುವಂತೆ ಆದೇಶ ಮಾಡಿರುತ್ತಾರೆ.

3. ಆ ಮೇರೆಗೆ ದಿಃ 15.06.2021 ರಂದು ಬೆಳಗ್ಗೆ 5 ಗಂಟೆಗೆ ಮಂಗಳೂರಿನ ಕಂಕನಾಡಿ ನಗರ ಪೊಲೀಸ್ ಠಾಣೆಯಿಂದ ಹುಬ್ಬಳ್ಳಿಯ ತೋಳನ ಕೆರೆ ಹೋಗಿ 2 ನೇ ಆರೋಪಿ ಪತ್ತೆಗೆ ಪ್ರಯತ್ನಿಸುತ್ತಿದ್ದಾಗ ಸಾಯಂಕಾಲ 5 ಗಂಟೆಗೆ ಬಾತ್ಮಿದಾರರು ಸದರಿ ತೋಳದ ಕೆರೆಯ ಗೋಕುಲ್ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿರುವುದಾಗಿ ತಿಳಿಸಿದ ಮೇರೆಗೆ ಅಲ್ಲಿಗೆ ಹೋಗಿದ್ದು ಆಗ ಆತನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಆತನನ್ನು

ಸುತ್ತುವರೆದು ವಿಚಾರಿಸಿದಾಗ ತನ್ನ ಹೆಸರು ಮತ್ತು ವಿಳಾಸವನ್ನು ಹೇಳಿದ್ದು ಆತನಿಗೆ ಪ್ರಕರಣದ ಬಗ್ಗೆ ವಿಚಾರಿಸಲಾಗಿ ಆತನು ತಪ್ಪು ಒಪ್ಪಿಕೊಂಡ ಮೇರೆಗೆ ಆತನನ್ನು ಸಂಜೆ 5.15 ಕ್ಕೆ ವಶಕ್ಕೆ ಪಡೆದು ಆತನ ಅಜ್ಜನಾದ ಸಿದ್ದಣ್ಣ ತಮ್ಮಯ್ಯ ರವರಿಗೆ ಮಾಹಿತಿಯನ್ನು ನೀಡಿ ನಂತರ ಅಲ್ಲಿಂದ 2 ನೇ ಆರೋಪಿಯೊಂದಿಗೆ ಮಂಗಳೂರಿಗೆ ಹೊರಟ್ಟಿದ್ದು ದಿಃ 16.06.2021 ರಂದು ಮಧ್ಯಾಹ್ನ 1.20 ಗಂಟೆಗೆ ವರದಿಯೊಂದಿಗೆ ಆತನನ್ನು ಪ್ರಾಸಾ–17 ರವರ ಮುಂದೆ ಹಾಜರುಪಡಿಸಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–44 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ–44(ಬಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎಂ.ಜೆ. ವಕೀಲರಿಂದ ಶ್ರೀ ವಿ.ಆರ್.ಎ. ವಕೀಲರ ಪರವಾಗಿಃ</u>**

ಪಾಟೀ ಸವಾಲು ಏನು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ** ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು